

ಮೂರು ತಿಂಗಳಿನವರೆಗೆ ಮಾತ್ರ ಈ ಸಮಸ್ಯೆ ಬಂದು ಮತ್ತೆ ಹೋಗಿಬಿಡಬಹುದು. ಸಂಧಿಗಳಲ್ಲಿ ಊತ ಬರಬಹುದು. ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಿಗೂ ಈ ಕಾಯಿಲೆ ಬೇಗನೆ ಬರುವ ಸಾಧ್ಯತೆ ಇದೆ. ಜೊತೆಗೆ ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ ಇರುವವರಿಗೆ ಸಂಧಿವಾತ ಬರುವ ಸಾಧ್ಯತೆ ಹೆಚ್ಚು.

ಸಂಧಿವಾತದ ಪರಿಣಾಮ ಮೂತ್ರಪಿಂಡ, ಶ್ವಾಸಕೋಶ, ನರಮಂಡಲ, ಹೃದಯ ಸೇರಿದಂತೆ ದೇಹದ ಇನ್ನಿತರ ಅಂಗಾಂಗಗಳ ಮೇಲೆಯೂ ಬೀರುವ ಸಾಧ್ಯತೆ ಇದೆ. ಈ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯದಿದ್ದರೆ ಕೀಲುಗಳು ಶಾಶ್ವತವಾಗಿ ಹಾನಿಗೊಳಗಾಗಬಹುದು. ಈಗೀಗ ಸಂಧಿವಾತ ಮಕ್ಕಳನ್ನೂ ಕಾಡುತ್ತಿದೆ. ಅತಿಯಾದ ತೂಕ, ಜಂಕ್ ಫುಡ್ ಸೇವನೆ ಇದಕ್ಕೆ ಕಾರಣ. ಸರಿಯಾದ ಸಮಯದಲ್ಲಿ ತಜ್ಞ ವೈದ್ಯರನ್ನು ಕಂಡು ಚಿಕಿತ್ಸೆ ಪಡೆಯುವುದು ಅನಿವಾರ್ಯ.

ಎಂಬುದು ಎಕ್ಸ್‌ರೇ ಮತ್ತು ಸಿ.ಟಿ. ಸ್ಕ್ಯಾನಿಂಗ್ ಪರೀಕ್ಷೆಗಳಿಂದ ಗೊತ್ತಾಯಿತು. ಇದನ್ನು ಸರಿಪಡಿಸಲು ಸಂಕೀರ್ಣವಾದ ಶಸ್ತ್ರಚಿಕಿತ್ಸೆಯನ್ನು ರೊಬೋಟ್ ಸಹಾಯದಿಂದ ಮಾಡಬೇಕಾಯಿತು' ಎಂದು ಹೇಳುತ್ತಾರೆ ನಾರಾಯಣ ಹೆಲ್ತ್ ಸಿಟಿಯಲ್ಲಿ ಆರ್ಥೋಪಿಡಿಕ್ ಸರ್ಜನ್ ಆಗಿರುವ ಡಾ. ಪ್ರಶಾಂತ್ ಬಿ.ಎನ್.

'ಈ ಪ್ರಕರಣದಲ್ಲಿ ಪ್ರಮಾಣಿತವಾದ ಇಂಪ್ಲಾಂಟ್‌ಗೂ ಮಿಗಿಲಾದ ಚಿಕಿತ್ಸೆಯೂ ಅಗತ್ಯವಿತ್ತು ಎನ್ನುವ ಅವರು, 'ರೋಗಿಯ ವಿಶಿಷ್ಟವಾದ ಮೂಳೆ ಸಂರಚನೆಯನ್ನು ಕರಾರುವಕ್ಕಾಗಿ ಹೊಂದಿಸುವುದು ಕೂಡ ನಮಗೆ ಸವಾಲಾಗಿತ್ತು. ಸಿ.ಟಿ. ಇಮೇಜಿಂಗ್ ಹಾಗೂ ತ್ರೀ–ಡಿ ಮಾದರಿಯ ಮೂಲಕ ರೋಗಿಗೆ ನಿರ್ದಿಷ್ಟ ಪ್ರಮಾಣದ ನೈಜ ಚಲನೆಗೆ ನೆರವಾಗುವ ಇಂಪ್ಲಾಂಟ್ ಅನ್ನು ವಿನ್ಯಾಸಗೊಳಿಸಿ ಅಳವಡಿಸಿದೆವು' ಎಂದು ವಿವರಿಸುತ್ತಾರೆ.

## ಏನಿದು ಆಸ್ಟಿಯೊ ಆರ್ಥರೈಟಿಸ್?

ಆಸ್ಟಿಯೊ ಆರ್ಥರೈಟಿಸ್ ಅಥವಾ ಅಸ್ಥಿ ಸಂಧಿವಾತ ಮೊಣಕಾಲಿನ ಕೀಲುಗಳಲ್ಲಿ ಉಂಟಾಗುವ ವಿಪರೀತ ನೋವು. ಸಾಮಾನ್ಯವಾಗಿ ಐವತ್ತು ವರ್ಷ ದಾಟಿದವರಲ್ಲಿ ಈ ಸಂಧಿವಾತ ಹೆಚ್ಚು ಬಾಧಿಸುತ್ತದೆ. ದೇಹದ ತೂಕ ಅತಿಯಾಗಿ ಇರುವವರಲ್ಲಿ, ಸ್ನಾಯು ಹಾಗೂ ಕೀಲುಗಳ ಮೇಲೆ ಒತ್ತಡ ಹೆಚ್ಚು ಬೀಳುವುದರಿಂದ ಅಸ್ಥಿ ಸಂಧಿವಾತ ಉಂಟಾಗುವ ಸಾಧ್ಯತೆ ಇದೆ. ಕ್ರೀಡಾಪಟುಗಳು ನಿರಂತರವಾಗಿ ಓಡುವುದರಿಂದ, ಬೇಕರ್ ಕೈಗಳಲ್ಲಿ ನಿರಂತರವಾಗಿ ಕೆಲಸ ಮಾಡುವುದರಿಂದ ಕೈಗಳ ಆರ್ಥರೈಟಿಸ್ ಕೂಡ ಬರುವ ಸಂಭವವಿದೆ.

## ಲಕ್ಷಣಗಳೇನು?

ಅಸ್ಥಿ ಸಂಧಿವಾತದ ಲಕ್ಷಣಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ಎಲ್ಲರೂ ಒಂದೇ ರೀತಿಯ ನೋವು ಅಥವಾ ಅಂಗವೈಕಲ್ಯ ಅನುಭವಿಸುವುದಿಲ್ಲ. ಕೆಲವರಿಗೆ ಚಳಿಗಾಲದಲ್ಲಿ ಮಾತ್ರ ಬಂದು ಹೋಗುವ ಸೌಮ್ಯ ಸ್ವಭಾವದ ನೋವು ಬರಬಹುದು. ಇನ್ನೂ ಕೆಲವರಿಗೆ ವರ್ಷಾನುಗಟ್ಟಲೆಯಿಂದ ಕಾಡುತ್ತಾ ಬಂದು ಮಂಡಿನೋವು ವೈಪರೀತ್ಯಕ್ಕೆ ಹೋಗಬಹುದು. ಹೆಚ್ಚಿನ ಉರಿಯೂತವೂ ಉಂಟಾಗಬಹುದು.

ಚಳಿಗಾಲದಲ್ಲಿ ವಿಪರೀತ ಚಳಿಯಿಂದಾಗಿ ಕಾಲುಗಳ ಕೀಲು ಮೂಳೆಗಳಲ್ಲಿ ಬಿಗಿತ ಉಂಟಾಗಬಹುದು. ಬೆಳಿಗ್ಗೆ ಎದ್ದಾಗ ನಡೆದಾಡಲೂ ಆಗದಂಥ ಪರಿಸ್ಥಿತಿ ನಿರ್ಮಾಣವಾಗಬಹುದು. ಚಲನೆಗೆ ಆರಂಭಿಸಿದ ಬಳಿಕ ಕ್ರಮೇಣ ನೋವು ಕಡಿಮೆಯಾಗಬಹುದು. ಕೀಲುಗಳ ಊತ ಕಾಣಿಸಿಕೊಳ್ಳಬಹುದು. ಕೀಲುಗಳ ನಡುವಿನ ದ್ರವ ಹೆಚ್ಚಳ ಹಾಗೂ ಇಲ್ಲಿರುವ ಮೃದು ಅಂಗಾಂಶದಲ್ಲಿ ಉರಿಯೂತ ಹೆಚ್ಚಾಗಿ ವಿಪರೀತ ನೋವು ಬಾಧಿಸಬಹುದು.

## ಆಸ್ಟಿಯೊ ಆರ್ಥರೈಟಿಸ್‌ಗೆ ಕಾರಣಗಳು

ಮಧುಮೇಹ, ಸ್ಥೂಲಕಾಯ, ಅಪಘಾತ, ಹೆಚ್ಚಿನ ವಯಸ್ಸಾಗುವುದರಿಂದ ಮೂಳೆಯ ಸವೆತ, ಹಾರ್ಮೋನಿನ ಏರುಪೇರು, ಲಿಗಮೆಂಟ್ಸ್ ನಾಶವಾಗುವಿಕೆ, ಗರ್ಭಾವಸ್ಥೆಯಲ್ಲಿ ಹೆಚ್ಚುವ ತೂಕ, ಬಾಲ್ಯದಲ್ಲಿ ದೈಹಿಕ ಶೋಷಣೆ ಮುಂತಾದವು ಆಸ್ಟಿಯೊ ಆರ್ಥರೈಟಿಸ್‌ಗೆ ಪ್ರಮುಖ ಕಾರಣಗಳು. ಇವಲ್ಲದೆ, ಹಿಂದೆ ಮಂಡಿಗೆ ಆಗಿದ್ದ ಗಾಯ, ಕ್ರೀಡೆ ಆಡುವಾಗ ಆಗುವ ಗಾಯ., ಕುಟುಂಬದ ಇತಿಹಾಸ, ವಯಸ್ಸು, ಗೌಟ್ ಸೇರಿದಂತೆ ಇತರ ಕಾರಣಗಳು ಅಸ್ಥಿ ಸಂಧಿವಾತವನ್ನು ಉಂಟುಮಾಡಬಹುದು.

## ಪರಿಹಾರವೂ ಇದೆ

ಅಸ್ಥಿ ಆರ್ಥರೈಟಿಸ್ ನಿವಾರಣೆಗೆ ಪರಿಹಾರವೂ ಇದೆ. ನೋವು ಬಂದಾಗ ವೈದ್ಯರನ್ನು ಕಾಣಬೇಕು. ಎಕ್ಸ್‌ರೇ, ಸ್ಕ್ಯಾನಿಂಗ್ ಮೂಲಕ ನೋವಿನ ಸ್ಥಳವನ್ನು ನಿಖರವಾಗಿ ಪತ್ತೆ ಹಚ್ಚಬಹುದು. ವ್ಯಾಯಾಮ, ಫಿಸಿಯೊಥೆರಪಿ, ಜೀವನಶೈಲಿ ಬದಲಾವಣೆಯಿಂದಲೂ ಈ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಸಾಧ್ಯ. ತೂಕ ಇಳಿಸುವಿಕೆಯಿಂದ ಎಲ್ಲ ರೀತಿಯ ಕಾಯಿಲೆಗಳಿಗೂ ಸೂಕ್ತ ಪರಿಹಾರ ಕಂಡುಕೊಳ್ಳಬಹುದು. ■